ಕಾದಂಬರಿ ನನ್ನದು. ಸಿನಿಮಾ ನನ್ನೊಬ್ಬನದ್ದೇ ಅಲ್ಲ. ಅದು ಗೊತ್ತಿರುವುದರಿಂದಲೇ ನಾನು ಎಂದೂ ಸಿನಿಮಾ ಒಂದಕ್ಕೇ ಅಂಟಿಕೊಳ್ಳಲಿಲ್ಲ.

◆ **ಪುಟ್ಟಣ್ಣ ಕಣಗಾಲ್ ಅವರಿಗೆ ನಿಮ್ಮ ಭಗ್ನಪ್ರೇಮದ ಕುರಿತು ತುಂಬಾ ಕುತೂಹಲವಿತ್ತಲ್ಲವೇ?**

ನಿಜ. ಅವರು ಆ ಹುಡುಗಿ ಯಾರು ಎಂದು ಪದೇಪದೇ ಕೇಳುತ್ತಿದ್ದರು. ಆಕೆಯ ಮನೆ ತೋರಿಸು ಎನ್ನುತ್ತಿದ್ದರು. ಸಂತೋಷವಾಗಿರುವ ಅವರಿಗೆ ಯಾಕೆ ಸುಮ್ಮನೆ ತೊಂದರೆ ಕೊಡಬೇಕು ಎನ್ನುತ್ತಿದ್ದೆ. ಪುಟ್ಟಣ್ಣನವರು 'ತಮ್ಮ ಸಿನಿಮಾ ಪೋಸ್ಟರನ್ನು ಆ ಹುಡುಗಿಯ ಮನೆಯ ಮುಂದೆ ಹಾಕಿಸಬೇಕು. ಅದರಲ್ಲಿ ದೊಡ್ಡದಾಗಿ ಬಿ.ಎಲ್. ವೇಣು ಎಂದು ಬರೆಸಿರಬೇಕು. ಅದನ್ನು ಅವಳು ನೋಡಬೇಕು' ಎನ್ನುತ್ತಿದ್ದರು. ಎಷ್ಟೋ ಸನ್ನಿವೇಶಗಳನ್ನು ಬರೆದಾಗ, ಅದು ನನ್ನ ಬದುಕಿನಲ್ಲಿ ನಡೆದ ಪ್ರೇಮದ ಘಟನೆಯೇ ಹೌದೇ ಎಂದು ವಿಚಾರಿಸಿಕೊಳ್ಳುತ್ತಿದ್ದರು. ಅವರು ತುಂಬಾ ಭಾವಜೀವಿ. ತಮ್ಮ ಸಿನಿಮಾವನ್ನು ಕರ್ನಾಟಕದ ಮನೆಮನೆಯವರೂ ನೋಡುತ್ತಾರೆ ಎಂದು ಬೀಗುತ್ತಿದ್ದ ಅವರೇ ಕೊನೆಕೊನೆಯಲ್ಲಿ ತಮ್ಮ ಸಿನಿಮಾ ಗೆಲ್ಲುತ್ತದೆಯೇ ಎಂಬ ಪ್ರಶ್ನೆಯನ್ನೂ ಹಾಕಿದ್ದಿದೆ.

◆ **'ಮದಕರಿನಾಯಕ' ಈಗ ಸಿನಿಮಾ ಆಗಿ ಸಾಕಾರವಾಗುತ್ತಿದೆ. ಸಿದ್ದಲಿಂಗಯ್ಯನವರಿಂದ ಇಲ್ಲಿಗೆ ಬಂದದ್ದು ಹೇಗೆ?**

ಸಿದ್ದಲಿಂಗಯ್ಯನವರ ನಂತರ ಆ ಸಿನಿಮಾ ಹಕ್ಕು ಕೆ.ಸಿ.ಎನ್. ಮೋಹನ್ ಅವರ ಹತ್ತಿರ ಇತ್ತು. ಹತ್ತು ವರ್ಷಗಳ ಹಿಂದೆ ಅವರು ನಿರಾಕ್ಷೇಪಣಾ ಪತ್ರಕ್ಕೆ ಸಹಿ ಹಾಕುವಂತೆ ಕೇಳಿದ್ದರು. ಆದರೆ, ಸಿನಿಮಾ ಚಿತ್ರೀಕರಣ ಪ್ರಾರಂಭವಾದರೆ ಮಾತ್ರ ಹಾಕುವುದಾಗಿ ತಿಳಿಸಿದ್ದೆ. ಈಗ ರಾಕ್‌ಲೈನ್ ವೆಂಕಟೇಶ್ ನಿರ್ಮಾಣದಲ್ಲಿ ಎಸ್.ವಿ. ರಾಜೇಂದ್ರಸಿಂಗ್ ಬಾಬು ಅದನ್ನು ನಿರ್ದೇಶಿಸುತ್ತಿದ್ದಾರೆ. ಕೊರೊನಾ ಇರುವುದರಿಂದ ಚಿತ್ರೀಕರಣ ಮುಂದಕ್ಕೆ ಹೋಗಿದೆ.

◆ **ರಾಜ್‌ಕುಮಾರ್ ಅವರ ಸಿನಿಮಾಗೆ ನೀವು ಯಾಕೆ ಬರೆಯಲು ಆಗಲಿಲ್ಲ?**

ಅಂಥ ಅವಕಾಶ ಅದ್ಯಾಕೋ ಸಿಗಲಿಲ್ಲ. ಆದರೆ, 'ರಣರಂಗ' ಸಿನಿಮಾಗೆ ಸಂಭಾಷಣೆ ಬರೆಯುವಂತೆ ನನ್ನನ್ನು ಕರೆಸಿ, ಅಡ್ವಾನ್ಸ್ ಕೂಡ ಕೊಟ್ಟಿದ್ದರು. ಹದಿನೈದು ದಿನ ಸತತವಾಗಿ ರಜಾ ಹಾಕಿ ಸಂಭಾಷಣೆ ಬರೆಯಬೇಕೆಂದು ಪಾರ್ವತಮ್ಮನವರು ಕೇಳಿದರು. ನನಗೆ ರಜಾ ಹಾಕಲು ಸಾಧ್ಯವಿರಲಿಲ್ಲ. ಹೀಗಾಗಿ ಆ ಸಿನಿಮಾ ಅವಕಾಶವೂ ನನ್ನದಾಗಲಿಲ್ಲ.

◆ **ಈಗ ನಿರ್ದೇಶಕರೇ ಸಿನಿಮಾಗಳಿಗೆ ಬರೆಯುವುದು ಹೆಚ್ಚಾಗುತ್ತಿದೆಯಲ್ಲ...**

ಹೌದು. ಚೆನ್ನಾಗಿಯೇ ಬರೆಯುತ್ತಿದ್ದಾರೆ. ಆದರೆ, ಅದರಿಂದ ಅನೇಕರು ತಂಡವಾಗಿ ಕೆಲಸ ಮಾಡುತ್ತಿದ್ದ ಹಳೆಯ ದಿನಗಳು ಇಲ್ಲವಾಗಿವೆ. ಉದಯಶಂಕರ್ ಅವರು ನನ್ನನ್ನು ಒಮ್ಮೆ ನೋಡಿ, 'ಎಲ್ಲರಿಗೂ ನೀವು ಸುಮ್ಮನೆ ಒಂದೇ ರೀತಿ ಸೆಲ್ಯೂಟ್ ಹೊಡೆದು ಸುಮ್ಮನಾಗುತ್ತೀರಿ. ನಾವು ಅವರೆಲ್ಲ ಬಂದರೆ ಎದ್ದುಹೋಗಿ ಆದರಿಸುತ್ತೇವೆ. ನಿಮಗೆ ಹೀಗೆ ಇರಲು ಹೇಗೆ ಸಾಧ್ಯ' ಎಂದಿದ್ದರು. 'ನಿಮಗೆ ಇದೇ ಊಟ. ನನಗೆ ಸರ್ಕಾರಿ ಕೆಲಸದ ಊಟವಿದೆ. ಅದಕ್ಕೇ ನಾನು ಅಲ್ಲಿ ನಿಮ್ಮಂತೆಯೇ ದೊಡ್ಡ ಅಧಿಕಾರಿಗಳನ್ನು ಆದರಿಸುತ್ತೇನೆ' ಎಂದಿದ್ದೆ. ಹೀಗೆ ನಡೆದುಕೊಂಡು ಬಂದಿದ್ದರಿಂದಲೇ ನಾನು ಸಿನಿಮಾದಲ್ಲಿ ಇಷ್ಟುಕಾಲ ಉಳಿಯಲು ಆಯಿತೇನೋ? ●